ANUBHAVS



# ‘‘ಎಸ್ ಸರ್!’’

© Copyright 2010, Manasamarthyadata.com

manasamarthyadata.com



*-ವಿನಯ ಬಲೆ*

ಮಾರ್ಚ್ ತಿಂಗಳ ಒಂದು ದಿನ, ನಾನು ಹಾಗೂ ನನ್ನ ಮಿತ್ರ ಗೌರಂಗಸಿಂಹ ವಾಗ್ಲೆ ಟ್ಯಾಕ್ಸಿಯಲ್ಲಿ ಮಂಗಳೂರು ವಿಮಾನ ನಿಲ್ದಾಣದತ್ತ ಹೋಗುತ್ತಿದ್ದೆವು. ಆ ಎರಡು ಘಂಟೆಗಳ ಪ್ರಯಾಣದಲ್ಲಿ ಆತ ನನಗೆ ಬಾಪೂಜಿಯವರ ಬಗೆಗೆ ತಿಳಿಸಿ ಹೇಳುತ್ತಿದ್ದನು. ಈ ರೀತಿ ಅಂದಿನ ದಿನ ನಾನು ಬಾಪೂರವರ ಮಾಹಿತಿಯನ್ನು ಪಡೆದೆನು. ಆತನ ಮಾತುಗಳನ್ನು ಸರಿಯಾಗಿ ಕೇಳಿಕೊಂಡ ನಾನು ಅತೀವ ಉತ್ಸಾಹದಿಂದ ಅವನಿಗೆ '' ಇಂದು ನಿನ್ನ ಮಾತುಗಳನ್ನು ಕೇಳಿ ನನಗನಿಸುತ್ತಿದೆ, ಖಂಡಿತವಾಗಿಯೂ ನನ್ನ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳುಂಟಾಗುವುದು'' ಎಂದು ಹೇಳಿದೆನು.

ನಿಜವಾಗಿಯೂ ಹಿಂತಿರುಗಿ ನೋಡಿ ನನ್ನ ಹಿಂದಿನ ಎರಡು ವರ್ಷಗಳಲ್ಲಿ ನಡೆದ ಘಟನೆಗಳನ್ನು ಅವಲೋಕಿಸಿದರೆ, ನನ್ನ ಜೀವನದಲ್ಲಿ ಬಹಳಷ್ಟು ಬದಲಾವಣೆಯಾಗಿದೆಯೆಂಬುದನ್ನು ನಂಬಲೇ ಬೇಕಾಗುತ್ತದೆ. ಅದು ಕೇವಲ ವ್ಯಾವಹಾರಿಕ ಬದಲಾವಣೆಗಳಷ್ಟೇ ಅಲ್ಲ, ನನ್ನ ಗುಣದಲ್ಲಿಯೂ ಬದಲಾವಣೆಯಾಗಿದೆ.

ಆದರೆ, ಕಳೆದ ಎರಡು ವರ್ಷಗಳಲ್ಲಿ ನನ್ನ ಜೀವನ ಪ್ರವಾಸವು ಇಂದಿನಷ್ಟು ಸರಳ ಹಾಗೂ ಸುಲಭವಾಗಿರಲಿಲ್ಲ. ಮನಸ್ಸಿನಲ್ಲಿ ಹಲವಾರು ಶಂಕೆಗಳು ಮೂಡುತ್ತಿದ್ದವು. ಹೀಗೆಲ್ಲಾದರೂ ನಡೆಯುವುದು ಸಾಧ್ಯವೇ? ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ಒಬ್ಬ ಮನುಷ್ಯ, ಬಿಳಿ ಶರ್ಟ್ ಮತ್ತು ಕಪ್ಪು ಪ್ಯಾಂಟಿನ ಸರಳ ಪೋಷಾಕು ಉಳ್ಳ, ಸಿಗರೇಟು ಸೇದುವ ಹಾಗೂ ಮದುವೆಯಾಗಿ ಗೃಹಸ್ಥಾಶ್ರಮಿಯಾಗಿರುವ ಸಂಸಾರವಂದಿಗನು ಎಲ್ಲಾದರೂ ಸದ್ಗುರುವಾಗಿರಲು ಸಾಧ್ಯವೇ? ಶಿರಡಿ ಸಾಯಿಬಾಬಾ, ಶ್ರೀ ದತ್ತಾತ್ರೇಯ, ಮಹಾವಿಷ್ಣುವಿನ ಅವತಾರವಾಗಿರಲು ಸಾಧ್ಯವೇ? ಈ ನುಂಗಲಾರದ ತುತ್ತು ನನ್ನ ಗಂಟಲಿನಿಂದಿಳಿಯಲು ಸುಮಾರು 16 ತಿಂಗಳುಗಳೇ ತಗಲಿದವು.

ಆ ಸಮಯದಲ್ಲಿ ನನಗಾದ ಅನುಭವದಿಂದ ನನಗೆ ಬಾಪೂರವರ ಬಗ್ಗೆ ಸಂಪೂರ್ಣ ಭರವಸೆ ಉಂಟಾಯಿತು. ಹಿಂದೊಮ್ಮೆ ನನಗೆ ಸಮೀರ್ ದಾದಾ ಹೇಳಿದ ಮಾತ್ತೊಂದು ನೆನಪಾಯಿತು.''

ಕಲ್ಪನೆಯ ಸೀಮೆಯನ್ನು ದಾಟಿದ ನಂತರ ನಿಷ್ಠೆಯ ಪ್ರಾಂತ ಶುರುವಾಗುತ್ತದೆ.'' ನೂರಕ್ಕೆ ನೂರರಷ್ಟು ಸತ್ಯ ವಚನ, ನಿಮಗೆ ನಿಷ್ಠೆ ಇದ್ದರೆ ಅದು ಪೂರ್ಣವೇ ಆಗಿರುತ್ತದೆ. ಇಲ್ಲದಿದ್ದರೆ ಇರುವುದೇ ಇಲ್ಲ. ಅಲ್ಲಿ 'ಇದೆ', ಮತ್ತು ಇಲ್ಲಿ 'ಇದೆ' ಇವೆರಡರ ಮಧ್ಯೆ ಏನೂ ಇರುವುದಕ್ಕೆ ಆಸ್ಪದವೇ ಇಲ್ಲ. ಈ ಯಾತ್ರೆಗೆ ಹೊರಡಬೇಕೆಂದರೆ ಆರಂಭ ಎಲ್ಲಾದರೊಂದು ಕಡೆಯಿಂದ ಆಗಲೇ ಬೇಕಲ್ಲ? ಆಗ ನನಗೆ ಒಮ್ಮೆ ಬಾಪೂರವರು ಹೇಳಿದ್ದ ಮಾತು ನೆನಪಾಯಿತು ''ನೀವು ಸದ್ಗುರುವಿನ ಕಡೆಗೆ ಪಯಣಿಸಬಯಿಸುವರಾದರೆ ಮೊದಲ ಹೆಜ್ಜೆ ನಿಮ್ಮದೇ ಆಗಿರಬೇಕು''

ಇದು ಮಾರ್ಚ್ 1999ರ ಘಟನೆ. ಜೂಯಿ ನಗರದಲ್ಲಿ ಮಂದಿರ ಸ್ಥಾಪನೆಯ ತಯಾರಿ ನಡೆದಿತ್ತು. (ಮುಂಬಯಿಯ ಪಕ್ಕದಲ್ಲಿ ನವೀ ಮುಂಬಯಿಯಲ್ಲಿರುವ ಜೂಯಿ ನಗರದಲ್ಲಿ ಬಾಪೂರವರು 'ಪಂಚಪುರುಷಾರ್ಥ' ಮಂದಿರವನ್ನು ಸ್ಥಾಪಿಸಿದ್ದಾರೆ.) ಈ ಕಾರ್ಯದ ಒಂದು ಅಂಗವಾಗಿ 30 ತೀರ್ಥ ಕ್ಷೇತ್ರಗಳ ಮೃತ್ತಿಕೆ (ಮಣ್ಣು)ಯನ್ನು ತಂದು ಅದನ್ನು ತುಂಬಿದ ಕಲಶಗಳನ್ನು ಮಂದಿರದಲ್ಲಿ ಇಡಬೇಕಾಗಿದ್ದಿತ್ತು. ಭೀಮಾಶಂಕರ (ಮಹಾರಾಷ್ಟ್ರದ ಒಂದು ತೀರ್ಥ ಸ್ಥಳ) ದಿಂದ ಮೃತ್ತಿಕೆಯನ್ನು ತರುವ ಕಾರ್ಯವನ್ನು ನನಗೆ ವಹಿಸಲಾಗಿತ್ತು. ಮಾರ್ಚ್ 14ರಂದು ನಾನು ನನ್ನ ಮಾವ (ಮಡದಿಯ ತಂದೆ) ಮತ್ತು ನನ್ನ ತಮ್ಮನೊಡನೆ ನನ್ನ ಕಾರು (ಪ್ರೀಮಿಯರ್ ಎಸ್‌ಇ 118)ನಲ್ಲಿ ಭೀಮಾಶಂಕರ್‌ಗೆ ಹೊರಟೆವು.

ನಾವು ಹಿಂದಿನ ದಿನ ಕಾರಿನಲ್ಲಿ 40 ಲೀಟರ್ ಪೆಟ್ರೋಲ್ ತುಂಬಿಸಿ ಚರ್ಚ್‌ಗೇಟ್‌ನಿಂದ ಹೊರಟ್ಟೆವು. 7 ಘಂಟೆಯಲ್ಲಿ 270 ಕಿ.ಮೀ. ಅಂತರ ಕ್ರಮಿಸಿದ ನಂತರ ನಮ್ಮ ಅಂದಾಜು ತಪ್ಪಿರುವುದು ಗಮನಕ್ಕೆ ಬಂದಿತ್ತು. ಕಾರ್ಯ ನಿರ್ವಹಿಸಿ ಹಿಂತಿರುಗುವ ಸಮಯದಲ್ಲಿ ನಮ್ಮ ಚಾಲಕ ಪೆಟ್ರೋಲ್ ಮುಗಿಯುತ್ತಿರುವುದನ್ನು ನಮ್ಮ ಗಮನಕ್ಕೆ ತಂದನು. ಟ್ಯಾಂಕ್‌ನಲ್ಲಿ ಕೇವಲ 6 ರಿಂದ 7 ಲೀಟರ್‌ನಷ್ಟು ಪೆಟ್ರೋಲ್ ಮಾತ್ರ ಉಳಿದಿತ್ತು. ದಾರಿಯಲ್ಲಿ ಸಿಕ್ಕಿದ ಪ್ರತಿಯೊಂದು ಪೆಟ್ರೋಲ್ ಪಂಪ್‌ನಲ್ಲಿ ನಾವು ವಿಚಾರಿಸುತ್ತಿದ್ದೆವು. ಆದರೆ ಯಾರ ಬಳಿಯೂ 'ಅನ್‌ಲಿಡೆಡ್ ಪೆಟ್ರೋಲ್ ಇರಲಿಲ್ಲ. ಈಗ ಇನ್ನೇನು ಮಾಡುವುದು ಲಿಡೆಡ್ ಪೆಟ್ರೋಲ್‌ನ್ನೇ ಹಾಕಿಸೋಣ ಎಂಬ ಸಲಹೆ ನಮ್ಮ ಚಾಲಕನ ಕಡೆಯಿಂದ ಬಂದಿತ್ತು. ಅದಕ್ಕೆ ನಮ್ಮ ಮಾವ ಹಾಗೂ ನನ್ನ ಸಹೋದರ ಕೂಡಾ ಅಸಹಾಯಕತೆಯಿಂದ ಗೋಣಾಡಿಸಿದರು. ಆದರೆ, ನನ್ನ ಮನಸ್ಸು ಮಾತ್ರ ಅದಕ್ಕೆ ಸಮ್ಮತಿಸಲು ತಯಾರಿರಲಿಲ್ಲ. ಯಾಕೆಂದರೆ ಆ ಪೆಟ್ರೋಲ್‌ನಿಂದ ಗಾಡಿಯ ಇಂಜಿನ್ ಕೆಟ್ಟು ಹೋಗಬಹುದೆಂದು ಹೆದರಿಕೆಯಿದ್ದಿತು ಹಾಗೂ ಬಾಪೂ ನಮ್ಮನ್ನು ಕಳಿಸಿರುವುದರಿಂದ ಎಲ್ಲವೂ ಸರಿಯಾಗೇ ಆಗುತ್ತದೆ ಎಂದು ನನಗೆ ಪೂರ್ಣ ಭರವಸೆಯಿದ್ದಿತ್ತು. ಬಾಪೂರವರ



ನಾಮಜಪವನ್ನು ಮಾಡುತ್ತಾ, ನಾವು ಹಾಗೆಯೇ ಪುಣೆ ರಸ್ತೆಯಲ್ಲಿ ಮುಂದುವರಿಯತೊಡಗಿದ್ದೆವು. ಮುಂದೆ ಸಾಗಿದಾಗ ನಮಗೆ ದಾರಿಯಲ್ಲಿ ಒಂದು ಪೆಟ್ರೋಲ್ ಪಂಪ್‌ನಲ್ಲಿ ಅನ್‌ಲಿಡೆಡ್ ಪೆಟ್ರೋಲ್ ಸಿಕ್ಕಿತ್ತು. ನಿತ್ಯ ಅಭ್ಯಾಸ ಬಲದಿಂದ ನಮ್ಮ ಚಾಲಕನ ಗಮನ ಸ್ಪೀಡೋ ಮೀಟರ್‌ನತ್ತ ಹರಿಯಿತು. ನೋಡಿದವ ಮಾತು ಬಾರದೇ ಆಶ್ಚರ್ಯಚಕಿತನಾಗಿ ಸ್ತಬ್ದನಾದನು!

'ಭೀಮಾಶಂಕರ'ದಿಂದ ಗಾಡಿ ಸುಮಾರು 150 ಕಿ.ಮೀ.ನಷ್ಟು ಚಲಿಸಿತ್ತು. ಅದೂ ಕೇವಲ 7 ಲೀಟರ್ ಪೆಟ್ರೋಲ್‌ನಲ್ಲಿ. ಏನಿದರರ್ಥ? ಏನಾದರೊಂದು ಪವಾಡ ನಡಿದಿರಲೇ ಬೇಕಲ್ಲ. ಮರುದಿನ ಆ ಮೃತಿಕೆಯನ್ನು ಕ್ಲಿನಿಕ್‌ಗೆ ಕೊಂಡೊಯ್ದು ಸುಚಿತ್ ದಾದಾರವರಿಗೆ ಒಪ್ಪಿಸಬೇಕಾಗಿತ್ತು. ಅದಕ್ಕಾಗಿ ನಾನು ಬೆಳಿಗ್ಗೆ 10.30ಕ್ಕೆ ಸರಿಯಾಗಿ ಕ್ಲಿನಿಕ್‌ಗೆ ತಲುಪಿದೆನು. ಅಲ್ಲಿ ಎಂದಿನಂತೆ ಜನ ತುಂಬಿದ್ದರು. ಸುಮಾರು 20 ನಿಮಿಷಗಳ ನಂತರ ನನ್ನ ಸರದಿ ಬಂದಾಗ' ಒಳ ಹೋಗಿ ದಾದಾರವರನ್ನು ಭೇಟಿಯಾದೆನು. ಅವರ ಕೈಗೆ ಮೃತ್ತಿಕೆಯನ್ನು ಒಪ್ಪಿಸಿ ಅವರಿಗೆ ಹಿಂದಿನ ದಿನದ ಘಟನೆಯನ್ನು ಸವಿಸ್ತಾರವಾಗಿ ವಿವರಿಸಿದೆನು. ಎಲ್ಲವನ್ನೂ ಕೇಳಿದ ಅವರ ಮುಖದ ಮೇಲೆ ಆಶ್ಚರ್ಯದ ಭಾವನೆಗಳನ್ನು ಎದುರು ನೋಡುತ್ತಿದ್ದ ನನ್ನ ಕಾತುರತೆಯನ್ನು ನಿರಾಸೆಗೊಳಿಸಿದ ಅವರು, ಸಂಪೂರ್ಣ ಸಹಜ ಭಾವದಿಂದ '' ಇಂಥಹ ಘಟನೆಗಳು ಪ್ರತೀ ದಿನ ಘಟಿಸುತ್ತಲೇ ಇರುತ್ತವೆ'' ಎಂದರು. ಅವರ ಈ ಪ್ರತಿಕ್ರಿಯೆಯಂತೂ ನನಗೆ ಅನಪೇಕ್ಷಿತವಾಗಿದ್ದಿತು.

ನಾನು ಕ್ಲಿನಿಕ್‌ನಿಂದ ಹೊರಬಿದ್ದಾಗ ಎದುರುಗಡೆ ಬಾಪೂ ಕಂಡರು. ನಾನು ಮುಂದಾಗಿ ಅವರ ಚರಣಗಳನ್ನು ಸ್ಪರ್ಶಿಸಿ ಭೀಮಾಶಂಕರ್‌ಗೆ ಹೋಗಿ ಬಂದೆನೆಂದು ಹೇಳಿದೆನು. ಅವರಿಗೂ ಎಲ್ಲಾ ವಿಷಯಗಳನ್ನು ಹೇಳಬೇಕೆಂದು ತುಂಬಾ ಅನಿಸುತ್ತಿದ್ದರೂ ಕೂಡಾ ಬಾಯಿಯಿಂದ ಶಬ್ದಗಳೇ ಹೊರಡಲಿಲ್ಲ. ಅದರೂ ಅಲ್ಪಸ್ವಲ್ಪ ಧೈರ್ಯ ಮಾಡಿಕೊಂಡು ''ಬಾಪೂ ನಿನ್ನೆ ನನ್ನ ಗಾಡಿಗೆ ಪೆಟ್ರೋಲ್ ತುಂಬಿಸಿದವರು ನೀವೇ ಎಂದು ನನಗೆ ಪೂರ್ಣ ಭರವಸೆಯಿದೆ'' ಎಂದು ಹೇಳಿಯೇ ಬಿಟ್ಟೆನು. ಆದರೂ ಬಾಪೂ ಸುಮ್ಮನೇ ನಡೆಯುತ್ತಲೇ ಇದ್ದರು ಹಾಗೂ ಕ್ಲಿನಿಕ್‌ನ ಕಡೆಗೆ ತಿರುಗುತ್ತಾ ನನ್ನ ಕಡೆಗೆ ತಿರುಗಿ ನಸುನಗುತ್ತಾ ಒಂದು ಕ್ಷಣ ನೋಡಿ ''ಎಸ್ ಸರ್'' ಎಂದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಏನೋ ಪವಾಡ ನಡೆದಿದೆ ಎಂಬುದಂತೂ ನನ್ನ ಗಮನಕ್ಕೆ ಬಂದಿತ್ತು. ಈಗಂತೂ ಬಾಪೂರವರ ಊವಾಚವು ನನ್ನ ನಂಬಿಕೆಯನ್ನು ಪೂರ್ಣ ದೃಢಪಡಿಸಿದೆ. ನಾನೇನಾದರೂ ಕ್ಲಿನಿಕ್‌ನಿಂದ ಹೊರ ಬರುವುದು ಸ್ವಲ್ಪ ತಡವಾಗಿದಿದ್ದರೆ ನನಗೆ ಬಾಪೂರವರು ಭೇಟಿಯಾಗುತ್ತಿರಲೇ ಇಲ್ಲ. ಇದೂ ಒಂದು.

ನನ್ನ ಜೀವನದಲ್ಲಿ ಇಂತಹ ಹತ್ತು ಹಲವಾರು ಘಟನೆಗಳು ಘಟಿಸಿವೆ. ಹಲವಾರು ಬಾರಿ ಬಾಪೂ ನನಗೆ ಸಂಕಟದಲ್ಲಿ ಸಹಾಯ ಮಾಡಿದ್ದಾರೆ. ಸಂಕಟದಿಂದ ಪಾರುಮಾಡಿದ್ದಾರೆ. ಹಲವಾರು ಅಸಂಭವಗಳನ್ನು ಸಂಭವವಾಗಿಸುವ ಹಾಗೆ ಮಾಡಿದ್ದಾರೆ. ಕೇವಲ ಅವರ ನಾಮ ಸ್ಮರಣೆಯಿಂದಲೇ ಮನಸ್ಸು ಪ್ರಸನ್ನಗೊಂಡು ಆತ್ಮ ವಿಶ್ವಾಸ ಹೆಚ್ಚುತ್ತದೆ. ಈ ಕಲಿಯುಗದಲ್ಲಿ ಆ ಪರಮಾತ್ಮ ಸ್ವಯಂ ರೂಪ ಧಾರಣೆ ಮಾಡಿದ್ದಾರೆ. ಆದುದರಿಂದ ಈ ಯುಗದಲ್ಲಿ ಈ ಭೂಮಿಯ ಮೇಲೆ ಜನ್ಮತಾಳಿದ ನಾವೆಲ್ಲರೂ ಭಾಗ್ಯಶಾಲಿಗಳೇ ಸರಿ.

ನನಗೆ ಚೆನ್ನಾಗಿ ಗೊತ್ತು, ನೀವೆಲ್ಲರೂ ನನ್ನಂತಹಾ ಅನುಭವಗಳ ಪ್ರತೀಕ್ಷೆಯಲ್ಲಿದ್ದೀರಿ ಹಾಗೂ ಅವುಗಳ ಮುಖಾಂತರ ನಿಮ್ಮ ಶ್ರದ್ಧೆಯನ್ನು ಬಾಪೂರವರ ಮೇಲೆ ದೃಢವಾಗಿಸಬಹುದೆಂದು ಕಾಯುತ್ತಿದ್ದೀರಿ ತಾನೆ?.... ಆದರೆ, ನಿಮ್ಮಲ್ಲಿ ನನ್ನದೊಂದು ಮನಃಪೂರ್ವಕ ವಿನಂತಿಯಿದೆ. ಅದೇನೆಂದರೆ ದಯವಿಟ್ಟು ನಿಮ್ಮ ಮನದಿಂದ ಅಹಂಕಾರವನ್ನು ತೆಗೆದು ಹಾಕಿರಿ. ಇದೇ ನಿಮ್ಮ ಮೊದಲನೇ ಹೆಜ್ಜೆ. ಮನದಲ್ಲಿ ಬಾಪೂರವರ ಪ್ರತಿ ಪೂರ್ಣ ನಿಷ್ಠೆಯನ್ನಿರಿಸಿ ತಾಳ್ಮೆಯನ್ನು ಹೊಂದಿರಿ ಹಾಗೂ ಉಳಿದೆಲ್ಲವ್ವೂಗಳನ್ನು ಅವರ ಚರಣಗಳಿಗೆ ಒಪ್ಪಿಸಿ ಬಿಡಿರಿ. ಯಾಕೆಂದರೆ ಶ್ರದ್ಧಾ ಮತ್ತು ಸಬುರಿ (ತಾಳ್ಮೆ) ಯೇ ಜೀವನದ ಆಧಾರ

ANUBHAVS

# HARI OM

© Copyright 2010, Manasamarthyadata.com

manasamarthyadata.com